ಕೆಡಿಸಿಕೊಂಡಿರಲಿಲ್ಲ. ಹೀಗಾಗಿ ಮುಂದೆ ಆ ಬಗ್ಗೆ ನಾವು ಹೆಚ್ಚು ಯೋಚಿಸಲಿಲ್ಲ. ಆದರೆ ಗೋಪಾಲಗೌಡರಿಂದ ಅನಿರೀಕ್ಷಿತವಾಗಿ ಮೂರ್ತಿಗೆ ಬಂದ ಪತ್ರ (1969ರ ನವಂಬರ್ 26) ನಮ್ಮ ಹರ್ಷವನ್ನು ಹೆಚ್ಚಿಸಿತು. 'ಗುರಪ್ಪಗೌಡರು ತಮ್ಮ ಮಗಳನ್ನು ವಿಷ್ಣುಮೂರ್ತಿಗೆ ಕೊಡಲು ಒಪ್ಪಿದ್ದಾರೆ, ಶಿವಮೊಗ್ಗದಲ್ಲಿ ತಾವೇ ಮದುವೆ ಮಾಡಿಕೊಡುತ್ತಾರೆ, ನಮ್ಮ ಅಪೇಕ್ಷೆಯಂತೆ ಸರಳ ಮದುವೆಗೆ ಒಪ್ಪಿದ್ದಾರೆ' ಎಂದು ಬರೆದಿದ್ದರು. ನಮ್ಮ ಸಂತೋಷವನ್ನು, ಒಪ್ಪಿಗೆಯನ್ನು ಗುರಪ್ಪ ಗೌಡರಿಗೆ ತಿಳಿಸಲು ಬರೆದೆವು. ಮೂರ್ತಿ ಈಗ ಒಮ್ಮೆ ಯಡೂರಿನ ತಮ್ಮ ಮನೆಯವರನ್ನೂ ಕಾಣಬೇಕಿತ್ತು. ಹೋಗಿ ಅಣ್ಣ ನಾಗರಾಜ್, ಅವ್ವ, ಇತರ ಬಂಧುಗಳಿಗೆ ವಿಷಯ ತಿಳಿಸಿ ಬಂದರು.

ಈ ಮಧ್ಯೆ ವಿಷ್ಣುಮೂರ್ತಿಗೆ ಅಕಸ್ಮಾತ್ ಚಿತ್ರದುರ್ಗಕ್ಕೆ ವರ್ಗವಾಯಿತು (1970ರ ಏಪ್ರಿಲ್ 3). ಹುಬ್ಬಳ್ಳಿಯಲ್ಲಿ ನೆಲೆ ಊರಿದ್ದ ಮೂರ್ತಿಗೆ ಇಲ್ಲಿಂದ ಹೋಗಲು ಮನಸ್ಸಿರಲಿಲ್ಲ. ಆದರೆ ಸರ್ಕಾರಿ ಸೇವೆಯಲ್ಲಿ, ಅದೂ ಆರಂಭದ ದಿನಗಳಲ್ಲಿ ಇಂಥ ಅನನುಕೂಲಗಳನ್ನು ಸಹಿಸಬೇಕಾಗುತ್ತದೆ. ಮೂರ್ತಿ ಚಿತ್ರದುರ್ಗಕ್ಕೆ ಹೋಗಿ ಸರ್ಕಾರಿ ಆಸ್ಪತ್ರೆ ಸೇರಲು ನಿರ್ಧರಿಸಿದರು. ವಿಚಿತ್ರವೆಂದರೆ, ಅದೇ ತಿಂಗಳು 23ರಂದು ಅವರಿಗೆ ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಗೆ ಮುಖ್ಯ ಸರ್ಜನ್ ಎಂದು ವರ್ಗವಾದ ಆದೇಶ ಬಂತು. ಮೂರ್ತಿ ತಕ್ಷಣ ಹೋಗಿ ಸೇರಿಕೊಂಡರು. ಕೂಡಿ ಬರುವಾಗ ಎಲ್ಲವೂ ಹೊಂದಿಕೊಳ್ಳುತ್ತದೆ. ಈ ವರ್ಗಾವರ್ಗಿಯಲ್ಲಿ ಗೋಪಾಲಗೌಡರ ಕೈ ಇದ್ದಿರಲೇ ಬೇಕು. ಆಗ ಖುಷಿಪಟ್ಟ ನಾನು, ಅ.ಮ. ಖಾನ್‌ರು ಒಮ್ಮೆ ಶಿವಮೊಗ್ಗೆಗೆ ಹೋಗಿ ವಿಷ್ಣುಮೂರ್ತಿಯನ್ನು ಕಂಡು ಬಂದೆವು.

ಮೆಗ್ಗಾನ್ ಆಸ್ಪತ್ರೆ ಜಿಲ್ಲಾ ಆಸ್ಪತ್ರೆ. ಅಂಥ ದೊಡ್ಡ ಆಸ್ಪತ್ರೆಯಲ್ಲಿ ಯಾವಾಗಲೂ ವ್ಯಸ್ತರಾಗಿರುತ್ತಿದ್ದ ಮೂರ್ತಿ, ಕರ್ತವ್ಯ ನಿಭಾಯಿಸುತ್ತಲೇ, ಒಬ್ಬ ಸಣ್ಣ ಹುಡುಗನಂತೆ ಸುತ್ತಾಡಿ, ನಮಗೆ ಎಲ್ಲ ವಿಭಾಗಗಳನ್ನು ತೋರಿಸಿದರು. ಆ ದಿನ ತಾವು ಉಳಿದುಕೊಂಡಿದ್ದ ಲಾಜಿಂಗ್‌ದಲ್ಲಿಯೇ ನಮ್ಮನ್ನು ಉಳಿಸಿಕೊಂಡು, ಮರುದಿನ ಕಳಿಸಿದರು.

5

ವಿಷ್ಣುಮೂರ್ತಿಯವರ ಮದುವೆಗಾಗಿ ಒಂದು ದಿನ ಮೊದಲೇ (1970ರ ಜೂನ್ 6) ಹುಬ್ಬಳ್ಳಿಯಿಂದ ಒಂದು ವಿಶೇಷ ಬಸ್ ಹೊರಡುವ ವ್ಯವಸ್ಥೆ ಮಾಡಲಾಗಿತ್ತು. ಅದರ ಜವಾಬ್ದಾರಿಯನ್ನು ಡಾ. ತಿ. ನಾರಾಯಣಸ್ವಾಮಿ, ಡಾ. ಡಿ. ದೇವರಾಜ್, ರಮೇಶ್ ವಹಿಸಿಕೊಂಡಿದ್ದರು. ಧಾರವಾಡದಿಂದ ನಾವು, ವೀಣಾ, ಚಂಪಾ, ಸೋನಕ್ಕನ ತವರುಮನೆ ಕಡೆಯವರು; ಹುಬ್ಬಳ್ಳಿಯಿಂದ ಅ.ಮ. ಖಾನ್ ಮುಂತಾದ ಮೂರ್ತಿಯವರ ಅನೇಕ ಆಪ್ತಮಿತ್ರರು ಸೇರಿದ್ದರು. ಅದೇ ದಿನ ಸಂಜೆ ಶಿವಮೊಗ್ಗ ತಲುಪಿದ ನಮಗೆಲ್ಲರಿಗೂ ದುರ್ಗಾ ಲಾಜ್‌ದಲ್ಲಿ ಒಳ್ಳೆಯ ವ್ಯವಸ್ಥೆ ಮಾಡಲಾಗಿತ್ತು. ಅಂಥ ವ್ಯಸ್ತತೆಯಲ್ಲಿಯೂ ವಿಷ್ಣುಮೂರ್ತಿ ಬಂದು ನಮ್ಮನ್ನು ಮಾತಾಡಿಸಿ ಹೋಗಿದ್ದರು. ಮರುದಿನ ಮದುವೆ (1970ರ ಜೂನ್ 7). ಗೋಪಾಲಗೌಡರ ನೇತೃತ್ವದಲ್ಲಿ ಹಿರೇತೋಟದ ಹಿರಿಯರು ಶಿವಮೊಗ್ಗೆಯ ನ್ಯಾಷನಲ್ ಹೈಸ್ಕೂಲ್‌ದಲ್ಲಿ ವಿಷ್ಣುಮೂರ್ತಿಯ ಮದುವೆಯನ್ನು, ಅವರ ಪ್ರಕಾರ ಅತ್ಯಂತ ಸರಳವಾಗಿ, ನಮ್ಮ ಪ್ರಕಾರ ಅದ್ದೂರಿಯಾಗಿ, ನೆರವೇರಿಸಿದರು. ವಿಷ್ಣುಮೂರ್ತಿ ಈಗ ಆ ಜಿಲ್ಲೆಯವರಷ್ಟೇ ಆಗಿರದೇ, ಅದೇ ಊರಿನ ಪ್ರಖ್ಯಾತ ಆಸ್ಪತ್ರೆಯ ಸರ್ಜನ್ ಆಗಿದ್ದರು, ಊರಿನ ಜನರಿಗೆ ಅಪೂರ್ವ ಸೇವೆ ನೀಡತೊಡಗಿದ್ದರು. ಅವರನ್ನು ತಿಳಿದಿದ್ದ ಮತ್ತು ಗೋಪಾಲಗೌಡರ ಸಮಾಜವಾದಿ ಪಕ್ಷದ ನಾಡಿನ ಎಲ್ಲ ಕಡೆಯ ಬಂಧುಗಳು ಬಂದು ಸೇರಿದ್ದರು. ವೈ.ಆರ್. ಪರಮೇಶ್ವರಪ್ಪ, ಕೋಣಂದೂರು ಲಿಂಗಪ್ಪ, ರವಳಪ್ಪ, ಗರ್ತಿಕೆರೆ ರಾಘಣ್ಣ ಮುಂತಾದವರು ಕಾಳಜಿ ವಹಿಸಿದ್ದರು. ಸ್ವತಃ ಗೋಪಾಲಗೌಡರು ಮತ್ತು ಸೋನಕ್ಕ ಅತ್ತಿತ್ತ ಓಡಾಡುತ್ತ, ತಮ್ಮ ಸ್ವಂತದ ತಮ್ಮ ಅಥವಾ ಮಗನ ಮದುವೆ ಮಾಡುತ್ತಿದ್ದವರಂತೆ ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಧಾರವಾಡದ ನಮ್ಮನ್ನಂತೂ ವಿಶೇಷ ಅಕ್ಕರಾಸ್ಥೆಯಿಂದ ಕಂಡು ಮಾತಾಡಿಸಿದರು. ಗೋಪಾಲಗೌಡರ ಆಪ್ತ ಅನುಯಾಯಿ, ಶಿಷ್ಯರಾಗಿದ್ದ ಕೋಣಂದೂರು ಲಿಂಗಪ್ಪ ವಿಶೇಷವಾಗಿ, ಹುಬ್ಬಳ್ಳಿಯಿಂದ ಬಂದವರನ್ನು ಆದರಿಸುವ ಹೊಣೆ ಹೊತ್ತಿದ್ದರು. ಅಂದಿನಿಂದ ಲಿಂಗಪ್ಪ ಕೊನೆಯವರೆಗೂ ನಮಗೆ ಆಪ್ತಮಿತ್ರರೇ ಆಗಿಬಿಟ್ಟರು.

ನಾವು ಈ ಮೊದಲು ಅಂಥ ಅದ್ದೂರಿ